

ಶಶಿಧರ ಹಳೇಮನಿ

# ಚಿಟ್ಟೆಯ ಸಹಬಾಳ್ವೆ

■ ಲಲಿತಾ ಕೆ. ಹೊಸಪ್ಯಾಟಿ

ಚಿನ್ನು ಮನೆಯ ಮುಂದಿನ ಗುಲಾಬಿ ಹೂವನ್ನೇ ದಿಟ್ಟಿಸಿದಳು, ಮೃದು ಹೂ ಪಕಳೆಗಳು ತೀಡಿ ಬರುವ ತಂಗಾಳಿಗೆ ತಲೆ ಆಡಿಸಿದವು. ಗುಲಾಬಿ ತನ್ನ ಚೆಲುವಿಗೆ ಸಾಟಿಯೇ ಇಲ್ಲವೆಂಬಂತೆ ಸುಂದರವಾಗಿ ನಗುತ್ತಿತ್ತು. ಆ ಹೂಗಳನ್ನು ದಾರಿ ಹೋಕರು ನೋಡುತ್ತ, ಎಷ್ಟೊಂದು ಗುಲಾಬಿ ಹೂಗಳು ಒಂದೇ ಗಿಡದಲ್ಲಿ ಅರಳಿವೆ? ಅಂತಾ ಖುಷಿಯಿಂದ ವರ್ಣನೆ ಮಾಡುತ್ತ ಹೋಗುತ್ತಿದ್ದರು. ಅಮ್ಮ ಎಷ್ಟು ಕಷ್ಟಪಟ್ಟು ಹೂವಿನ ಗಿಡ ಹಚ್ಚಿದಳು. ನಿತ್ಯ ತಾನೂ ನೀರೆರೆದೆ. ಇದು ತನ್ನದೇ ಪುಷ್ಪ ಇನ್ನಾರಿಗೂ ಇದನ್ನು ಕೊಡಲಾರೆ ಎನಿಸಿತು. ಅಷ್ಟರಲ್ಲಿಯೇ ಪಕ್ಕದ ಮನೆಯ ಪೋರ ಸ್ನೇಹಿತ ಹರ್ಷಿತ ಓಡಿ ಬಂದ, ಚಿನ್ನು ಚಿನ್ನು ಇವತ್ತು ನಮ್ಮ ಶಾಲೆಯಲ್ಲಿ ಗುಲಾಬಿ ಹೂವಿನ ಚಿತ್ರ ತೆಗೆದು ಅದಕ್ಕೆ ಹೂವಿನ ಪಕಳೆಗಳನ್ನು ಅಂಟಿಸಿಕೊಂಡು ಬರುವ ಪ್ರಾಜೆಕ್ಟ್ ಕೊಟ್ಟಿದ್ದಾರೆ. ನಿಮ್ಮ ಅಂಗಳದಲ್ಲಿ ಎಷ್ಟೊಂದು ಹೂಗಳು! ಪ್ಲೀಸ್ ಒಂದೇ ಒಂದು ಹೂ...ಕೊಡು..! ಗೋಗರೆದ.

ಅಯ್ಯೋ.. ಇಲ್ಲಪ್ಪ, ಬೆಳ್ಳಂಬೆಳಿಗ್ಗೆ ಗುಲಾಬಿ ಕೀಳಲು ಮನಸ್ಸಿಲ್ಲ. ಒಂದು ಹೂ ಬೆಳೆಸಬೇಕೆಂದರೆ ಸುಮ್ಮನೇನಾ? ಪ್ರತಿದಿನ ನೀರು ಎರೆಯಬೇಕು, ಗೊಬ್ಬರ ಸುರಿಯಬೇಕು. ಮಡಿ ಕಟ್ಟಬೇಕು, ಬೇಲಿ ನಡಬೇಕು. ಮತ್ತೆ ಚಿಗುರೊಡೆಯುವವರೆಗೂ ಕಾಯಬೇಕು. ನೀನೇನು ಬರಿಗೈಲಿ ಬಂದಿದ್ದೀಯಾ? ಅದಕ್ಕೊಂದಿಷ್ಟು ನೀರು ಹಾಕಿದೆಯಾ? ಮಣ್ಣು ಸುರುವಿದೆಯಾ? ಏನು ಮಾಡಿದೆ? ನಿನಗೇಕೆ ಕೊಡಬೇಕು ಗುಲಾಬಿ, ನಡೆಯಾಚೆ ಎಂದು ಗದರಿದಳು ಚಿನ್ನು. ಅರಳಿ ನಿಂತ ಗುಲಾಬಿ ಗಿಡದಿಂದ ಹರ್ಷಿತ ಕದಲಲೇ ಇಲ್ಲ, ನೋಡುತ್ತಲೇ ಇದ್ದ. ನಮ್ಮ ಮಿಸ್ಸು ಬೇರೆ ತಾಜಾ ಗುಲಾಬಿ ಹೂವೇ ತಂದು ಅಂಟಿಸಬೇಕೆಂದರು. ಬೇಡಪ್ಪಾ ಈ ತಂಟೆ? ನಾನೇ ಒಂದು ಗುಲಾಬಿ ಗಿಡ ಬೆಳೆಸಿಬಿಡುವೆ ಎಂದು ನಿರ್ಧರಿಸಿ ಒಂದು ಕಾಲು ಮುಂದೆ ಇಟ್ಟ. ಆಗ ಚಿನ್ನು ಹೋದ ಬಿಡು ಎಂದು ಮನೆಯೊಳಗೆ ನಡೆದಳು. ಮನಸ್ಸು ತಡೆಯದೇ ಹರ್ಷಿತ ಮೃದುವಾಗಿ ಒಂದೊಂದೇ ಹೂಗಳ ಮೇಲೆ ಹಸ್ತ ಸವರಿದ, ಬಾಗಿ ಪಪ್ಪಿಕೊಟ್ಟ. ಪುಟ್ಟ ಮಗು ಮೃದುವಾಗಿ ತಡವಿದ ಪ್ರೀತಿ ತೋರಿದ ರೀತಿಗೆ ಎಲ್ಲ ಹೂಗಳು ಪುಳಕಗೊಂಡವು. ಅಯ್ಯೋ ಮುದ್ದಾದ ಹುಡುಗ, ಎಷ್ಟು ಪ್ರೀತಿಸುತ್ತಾನೆ? ಎಂದವು.

ನಂತರ ಚಿನ್ನು ಹೊರಗೆ ಬಂದರೆ ಒಂದೇ ಒಂದು ಚಿಟ್ಟೆ ಬಣ್ಣದ ರೆಕ್ಕೆ ಬಿಚ್ಚಿ ಹಾರಾಡುತ್ತಿತ್ತು. ಗುಲಾಬಿ ಗಿಡದ ಸುತ್ತಲೂ ಗಿರಕಿ ಹೊಡೆಯುತ್ತಿತ್ತು. ಮತ್ತೇ ಮೇಲೆ ಹಾರಿ ಗುಯ್ಯು... ಎನ್ನುತ್ತ ಮತ್ತೆ ಕೆಳಗಿಯುತ್ತಿತ್ತು. ನೋಡಿದರೆ